**'Solitariness is the only truth in man's life.'**

'ಆದರೆ ಚಾರೂ ಅದು ನೈಸರ್ಗಿಕವಲ್ಲ. ಮನುಷ್ಯನ ಪ್ರಕೃತಿಗೆ ಅದು ಅಸಹಜ. ಹಾಗೆ ಮೂಲೆಯಲ್ಲಿ ನಿಂತುಕೊಂಡು ಮಾತನಾಡುವುದು ಕೂಡ ಅಸಹಜವೇ.'

ಆ ಮೂಲೆ ಮನುಷ್ಯನ ಮಾತುಗಳು ರಸ್ತೆಯ ಗಲಭೆಯಲ್ಲಿ ಮುಳುಗಿ ಎಷ್ಟೋ ಬಾರಿ ಕಳೆದು ಹೋಗುತ್ತವೆ. ಆದರೆ ಆ ಧ್ವನಿಯಲ್ಲಿರುವ ಸಿಟ್ಟು, ದುಃಖ, ತಳಮಳ ವರಾಂಡದಲ್ಲಿ ಕುಳಿತಲ್ಲಿಯೇ ಅವರಿಗೆ ಎಲ್ಲವೂ ಸರಳ, ಸ್ಪಷ್ಟವಾಗಿ ಕೇಳಿ ಬರುತ್ತವೆ. ಅವನಲ್ಲಿ ಹೇಳಲು ಇಷ್ಟೆಲ್ಲಾ ಇರುವುದರಿಂದ ಯಾರಾದರೂ ಅವನ ಮಾತುಗಳನ್ನು ಕೇಳಲೇಬೇಕು ಎಂದು ಆಲೋಚಿಸಿ ಒಂದು ದಿನ ಅವರು ಆ ಮನುಷ್ಯನ ಎದುರು ಹೋಗಿ ನಿಂತುಕೊಂಡರು. ತುಂಬಾ ಹೊತ್ತು ನಿಂತುಕೊಂಡರು. ಅವನು ಮಾತನಾಡಿದ... ಮಾತನಾಡಿದ... ಮಾತನಾಡಿದ. ಆದರೆ ಇವರತ್ತ ತಿರುಗಿಯೂ ನೋಡಲಿಲ್ಲ. ಇವರ ಅಸ್ತಿತ್ವದ ಅರಿವು ಕೂಡ ಅವನಿಗೆ ಆಗಲೇ ಇಲ್ಲ.

ಅವನು ಅಲ್ಲಿ ನಿಂತುಕೊಂಡು ಮಾತನಾಡುತ್ತಿದ್ದ ಒಬ್ಬನೇ.

ಮತ್ತು ಇವರು ಅವನ ಮುಂದೆ ನಿಂತು ಕೇಳುತ್ತಿದ್ದರು ಒಬ್ಬರೇ.

**No communication of any type between the two!**

ಅವರ ನಡುವೆ ಯಾವುದೇ ಸಂವಾದ ಇರಲಿಲ್ಲ.

ಹೀಗೇಕೆ?

ಅವರಿಗೆ ಹುಡುಕಿದರೂ ಉತ್ತರ ಸಿಗಲಿಲ್ಲ. ಆಮೇಲೆ ಅವರು ತಮ್ಮ ಪ್ರತಿಯೊಂದು ಉತ್ತರವಿಲ್ಲದ ಪ್ರಶ್ನೆಯ ಹಾಗೆ ಈ ಪ್ರಶ್ನೆಯನ್ನೂ ಮನಸ್ಸಿನ ತಳದಲ್ಲಿ ಗುಟ್ಟಾಗಿ ಇಟ್ಟರು. ಚಾರುವಿನ ಹಾಗೆ ಪ್ರತಿಯೊಂದು ಪ್ರಶ್ನೆಗೆ ಉತ್ತರ ಹುಡುಕಿಕೊಳ್ಳುವ ಹುಚ್ಚುತನವನ್ನು ಅವರು ಮಾಡಲಾರರು. ಅವರು ಇಪ್ಪತ್ತೈದು ವರ್ಷ ಕಾಲೇಜಿನಲ್ಲಿ ಪಾಠ ಕಲಿಸಿದ್ದಾರೆ. ಪಾಠದ ಪ್ರತಿಯೊಂದು ಪ್ರಶ್ನೆಯನ್ನು ಸುಲಭವಾಗಿ ಬಿಡಿಸಿದ್ದಾರೆ. ಬಿಡಿಸಲಾಗದ ಅವರ ಪ್ರಶ್ನೆ ಇರುವುದಾದರೆ ಅದು ಬದುಕಿನದು!

ತಾನು ಇಷ್ಟು ವರ್ಷ ಕಲಿಸಿರುವುದು ಸುಮ್ಮನೆಯೇ. ಸುಮಾರು ಎಷ್ಟು ಮಕ್ಕಳಿಗೆ ಕಲಿಸಿರಬಹುದು? ಹೇಳಲು ಸಾಧ್ಯವಿಲ್ಲ. ಅವರಿಗೆ ಕಣ್ಣು ತೆರೆದಿಟ್ಟು ಗಮನವನ್ನು ಬೇರೆಡೆ ಹರಿಸಿ ತನ್ನ ಮುಂದೆ ಕುಳಿತಿರುತ್ತಿದ್ದ ವಿದ್ಯಾರ್ಥಿಗಳು ನೆನಪಾದರು. ಅವರಿಗೆ ಅದು ಗೊತ್ತಾಗುತ್ತಿರಲಿಲ್ಲವೆಂದಲ್ಲ. ಆದರೆ ಅವರಾದರೂ ಏನು ಮಾಡಬಹುದಿತ್ತು. ಹೆಚ್ಚೆಂದರೆ ಅವರ ದೃಷ್ಟಿ ತನ್ನ ಮೇಲೆ ಕೇಂದ್ರೀಕೃತಗೊಳಿಸುವುದು ಅವರಿಗೆ ಸಾಧ್ಯವಾಗಬಹುದಿತ್ತು... ಆದರೆ ಚಿತ್ತವನ್ನು? ಸ್ವತಃ ಅವರೇ ಅದನ್ನು ನಿಯಂತ್ರಿಸಿಕೊಳ್ಳಬೇಕಾಗುತ್ತದೆ. ಆಗ ಅವರಿಗೆ ತನ್ನ ಮೇಲೆಯೇ ಸಿಟ್ಟು ಬರುತ್ತಿತ್ತು. ಕಲಿಸುವ ಅಸಹನೆ ಮೂಡುತ್ತಿತ್ತು. ಇಂತಹ ಮಕ್ಕಳಿಗೆ ಏನು ಕಲಿಸುವುದು? ಆದರೆ ತನ್ನನ್ನು ವಂಚಿಸಿಕೊಳ್ಳುವುದು ಅವರಿಗೆ ಸೇರುತ್ತಿರಲಿಲ್ಲ. ಯಾರು ಕೇಳಲಿ, ಇಲ್ಲ ಕೇಳದಿರಲಿ, ಅವರು ಮನಸ್ಸಿಟ್ಟು ಕಲಿಸತೊಡಗಿದ್ದರು. ಅದರಲ್ಲಿ ಯಾರು ಎಷ್ಟು ಪಡೆದರು ಎನ್ನುವುದನ್ನು ಹೇಳುವುದು ಮಾತ್ರ ಅವರಿಗೆ ಸಾಧ್ಯವಾಗುತ್ತಿರಲಿಲ್ಲ.

'ಚಾರೂ, ಸ್ವಂತದ ಕಡೆಗೆ ಎಂದೂ ವಂಚನೆ ಮಾಡಿಕೊಳ್ಳಬಾರದು. ತನಗೆ ಒಪ್ಪಿಗೆ ಆಗುವುದನ್ನೇ ಮಾಡಬೇಕು. ಒಪ್ಪಿಗೆ ಆಗದಿರುವುದು ಒಪ್ಪಿಗೆ ಆಗುವುದು ಎಂದುಕೊಳ್ಳುವ, ಒಪ್ಪಿಗೆ ಆಗುವುದಿಲ್ಲ ಎಂದುಕೊಳ್ಳುವ ದುರಾಗ್ರಹ ಮಾಡಬಾರದು.'

'ಸರ್, ಒಬ್ಬರಿಗೆ ಒಪ್ಪಿಗೆಯಾಗುವುದು ಇನ್ನೊಬ್ಬರಿಗೆ ಒಪ್ಪಿಗೆಯಾಗಬೇಕು ಎಂದೇನಿಲ್ಲ.